ಜೆ.ಎಂ.ಎಸ್. ಮಣಿ



# ಹರುಷದ ಹುಡುಕಾಟ

ಮತ್ತೆಂದೂ ಸಿಗದ ಮತ್ತೊಂದು ವರ್ಷವನ್ನು ಬೀಳ್ಕೊಟ್ಟಿದ್ದೇವೆ. ಅದು, ಸುಖವನ್ನು ಕೊಟ್ಟ ವರ್ಷ, ಸಂಕಟಗಳನ್ನು ಸಾಲಾಗಿರಿಸಿದ ವರ್ಷ. ಕಳೆದ ವರ್ಷದ ಬೆನ್ನಿಗೇ ಚಿಗುರುತ್ತಿದೆ ಹೊಸ ವರ್ಷ. ಹಳೆಯ ವರ್ಷದ ನೆನಪುಗಳ ಭೂಮಿಕೆಯಲ್ಲಿ, ಹೊಸ ವರ್ಷದಲ್ಲಿ ಹೊಸ ಕನಸುಗಳನ್ನು ಕಟ್ಟಿಕೊಳ್ಳುವ ಬದುಕು ನಮ್ಮದು.

‘ಮಯೂರ’ದ ಪಾಲಿಗೆ 2009 ಹಬ್ಬದಂತಹದ್ದು. ‘ಜೂಟಾಟ’ದ ಪ್ರಯೋಗ ಹಾಗೂ ಸ್ಪರ್ಧೆಯ ನೆಪದಿಂದ ಕಾಣಿಸಿಕೊಂಡ ಕಥಾಸುಗ್ಗಿಯಿಂದಾಗಿ ವರ್ಷಪೂರ್ತಿ ಹಬ್ಬದ ಕಳೆಯಿತ್ತು. ಈಗ ಹಬ್ಬ ಮುಗಿದಿದೆ. ಆದರೆ, ಸಡಗರ ತುದಿಯಿಲ್ಲದ್ದು. ಹರುಷದ ಹೊಸ ನೆಲೆಗಳ ಮಯೂರದ ಹುಡುಕಾಟ ನಿರಂತರವಾದದ್ದು, ವರ್ಷವಿಡೀ ನಡೆಯುವಂತಹದ್ದು.

ದೇವನೂರು ಮಹಾದೇವ ಅವರ ಲೇಖನ ಈ ಸಂಚಿಕೆಯ ವಿಶೇಷ. ಸದ್ಯದ ಸಾಂಸ್ಕೃತಿಕ–ರಾಜಕೀಯ ಲಜ್ಜೆಗೇಡಿತನವನ್ನು ವಿಮರ್ಶಿಸುವ ದೇವನೂರರ ಬರಹ ನಮ್ಮ ನಮ್ಮ ಒಳಗನ್ನು ಸ್ಪರ್ಶಿಸುವಂತಹದ್ದು.

ಓದುಗರಿಗೆ ಹೊಸ ವರ್ಷದ ಶುಭಾಶಯಗಳು.

–ಸಂಪಾದಕ